ನನ್ನಂಥವರು ನೆನಪೂ ಆಗಲಿಕ್ಕಿಲ್ಲ. ಈಗ ಆಸಾಮಿಯ ಆಟಿಟ್ಯೂಡೇ ಬದಲಾಗಿ ಹೋಗಿದೆ. ಹಿಂದೆ ಆ ಶ್ರಾವಣಿಯನ್ನು ನೋಡಿದಾಗಲೆಲ್ಲಾ 'ಅಂದಮುನ ಕೋತಿಪಿಲ್ಲ' ಅಂತ ಹಂಗಿಸುತ್ತಿದ್ದ. ಈಗ ಅವಳಿಗೆ ಅಮೆರಿಕದ ಕಂಪನಿಯಲ್ಲಿ ಕೆಲಸ ಸಿಕ್ಕಿದ್ದೇ ತಡ, ವೀಕೆಂಡ್ಸ್ ಎಲ್ಲಾ ಅವಳ ಅಪಾರ್ಟ್‌ಮೆಂಟಿನಲ್ಲೇ ಕಳೀತಾನಂತೆ. ಶ್ರೀನಿವಾಸ್ ಅಲ್ಲದಿದ್ದರೆ ಮತ್ತೊಬ್ಬ ಸುಬ್ಬಾರಾವು! ಅಮ್ಮ ಹೇಗೋ ಅಮೆರಿಕ ಸಂಬಂಧದ ಅನ್ವೇಷಣೆಯಲ್ಲಿದ್ದಾಳೆ. ಗೊತ್ತಿರುವ ಹುಡುಗ ಆದರೆ ಅನುಕೂಲ ಅಂತ ಯೋಚನೆ ಮಾಡತಾ ಇದ್ದೇನೆ. ಇಲ್ಲೂ ಜೀನ್ಸ್ ಧರಿಸಿದ ಮನುಗಳು ಧಾರಾಳವಾಗಿ ಸಿಗುತ್ತಾರೆ. ಉದಾಹರಣೆಗೆ ಜ್ಯೋತಿಯ ಗಂಡನನ್ನೇ ನೋಡಿ. ಅವಳನ್ನ ಹೇಗೆಲ್ಲಾ ಸತಾಯಿಸುತ್ತಾನೆ ಅಂತ! ಹೌದೂ...ಜ್ಯೋತಿ ಬರಬೇಕಿತ್ತಲ್ಲವಾ ಇಲ್ಲಿಗೆ.

* * *

ಇಗೋ ಬಂದೆ! ಬರದೇ ಇನ್ನೆಲ್ಲಿಗೆ ಹೋಗಲಿ? ರಾಧಾ ಚಿಂತಗಿಂಜಲ ಆಫೀಸಿನಲ್ಲಿ ತಾನೇ ಇವರು ಕೆಲಸ ಮಾಡುವುದು. ಮೇಲಾಗಿ ನಾವೆಲ್ಲಾ ತೆಲುಗಿನವರು. ಬರಲ್ಲ ಅಂದರೆ ಇವರು ಸುಮ್ಮನಿರುತ್ತಾರಾ? ಇಲ್ನೋಡಿ, ಎರಡು ವರ್ಷಕ್ಕೇ ನಾಲ್ಕು ವರ್ಷದ ಭೂತದ ಹಾಗೆ ಕಾಣುವ ಮಗಳು, ಡೈಪರ್ ಬ್ಯಾಗ್, ಹೊಟ್ಟೆಯಲ್ಲಿ ಆರು ತಿಂಗಳ ಮಗುವನ್ನು ಬೇರೆ ಹೊತ್ತು ಬಂದೆ. ನನ್ನ ಪತಿ ಮಹಾಶಯನಿಗೆ ಅಮೆರಿಕದಲ್ಲಿ ಡಾಲರ್ ಹೊರತು ಬೇರೇನೂ ಕಣ್ಣಿಗೆ ಬೀಳೋದೇ ಇಲ್ಲ. ಮನೆ ಕೆಲಸ ಹಂಚಿಕೊಳ್ಳುವ ಗೀತಾಳ ಗಂಡನ ಥರದವರು, ಮಕ್ಕಳನ್ನು ಸಾಕುವ ಗಂಡಸರು, ಅಮೆರಿಕಕ್ಕೆ ಬಂದ ಕೂಡಲೇ ಹೆಂಡತಿಗೆ ಕಾರ್ ಡ್ರೈವಿಂಗ್ ಕಲಿಸುವ ಗಂಡಸರು ಇವರಿಗೆ ಕಾಣೋದೇ ಇಲ್ಲ. ಕೊನೆಪಕ್ಷ ಇಂಗ್ಲಿಷ್ ಮಾತಾದರೂ ಕಲಿಸಿದನಾ? ಯಾವಾಗ ನೋಡು ಮೊಸರು ವಡೆ ಮಾಡ್ತೀಯಾ! ಚಿಲ್ಲಿ ಚಿಕನ್ ಮಾಡ್ತೀಯಾ! ಮಗು ರಂಪ ಮಾಡದ ಹಾಗೆ ನೋಡಿಕೊ, ನಾನು ನಿದ್ದೆ ಮಾಡಬೇಕು! ಹೀಗೆ. ಹೋಗಲಿ ಬಾಣಂತನಕ್ಕಾದರೂ ಅಮ್ಮನ ಮನೆಗೆ ಹೋಗೋಣ ಅಂದುಕೊಂಡರೆ ಇಲ್ಲಿ ಹಡೆದರೆ ಮಾತ್ರ ಮಕ್ಕಳು ಅಮೆರಿಕನ್ ಸಿಟಿಜನ್ಸ್ ಆಗ್ತಾರಂತೆ. ಯಾವ ಸಿಟಿಜನ್ನೋ ಏನು ಕಥೆಯೋ! ನೆಂಟರ ಎದುರು ಪ್ರತಿಷ್ಠೆಗಾಗಿ ಇಪ್ಪತ್ತು ಲಕ್ಷ ರೂಪಾಯಿ ಸುರಿದು ನಮ್ಮಪ್ಪ ಇವರಿಗೆ ಗಂಟು ಹಾಕಿದ. ಅಷ್ಟಕ್ಕೂ ನಾನು ಮಾಡಿದ ತಪ್ಪಾದರೂ ಏನು! ಪಕ್ಕದ ಮನೆಯ ರಾಜಾನೊಂದಿಗೆ ಸಿನಿಮಾಗೆ ಹೋಗಿದ್ದು. ಅಷ್ಟೇ! ಅರ್ಧದಲ್ಲೇ ಪಿಯುಸಿ ಬಿಡಿಸಿ ಹದಿನೆಂಟು ತುಂಬುವ ಮೊದಲೇ ಹೀಗೆ ಅಮೆರಿಕಕ್ಕೆ ಅಟ್ಟಬಿಟ್ಟ. ಈಗಿನ ಕಾಲಕ್ಕೂ ಇದೆಲ್ಲಾ 'ವಿಧಿ', 'ಕರ್ಮ' ಅಂತ ಹಳಿದುಕೊಳ್ಳುವುದು ನನ್ನಂಥ ಅಸಹಾಯಕರಿಗೆ ತಪ್ಪುತ್ತಿಲ್ಲ ನೋಡಿ!

* * *

ಸತ್ಯನಾರಾಯಣ ಪೂಜೆ, ಒಬ್ಬಟ್ಟು, ಕಜ್ಜಾಯ, ಕೆನೆಯ ಕಾಂಬಿನೇಷನ್ ಜತೆಗೆ ಹುರುಳಿ ಕಾಳಿನ ಸಾರು, ತಾಂಬೂಲ, ಜತೆಗೆ ಬೆಳ್ಳಿ ಬಟ್ಟಲಿನ ಕಾಣಿಕೆ. ಇಂಡಿಯಾದಲ್ಲಿ ಈಗ ಯಾರೂ ಲಕ್ಷ ಬತ್ತಿಯ ವ್ರತ ಮಾಡ್ತಾ ಇಲ್ಲ ಅನಿಸತ್ತೆ. ಆ ವೈಭೋಗವನ್ನೂ ಇಲ್ಲೇ ಕಣ್ಣು ತುಂಬಿಕೊಳ್ಳಬಹುದೇನೊ! ಅದೊಂದು ದಿನ ರಮಣೀ ಪಾಮುಲೂರಿ ಮನೆಯಲ್ಲಿ ಸ್ವಾಮೀಜಿ ಒಬ್ಬರು ಯಜ್ಞ ಮಾಡಿದರು. ಆಕೆ ಕೂಡಾ ಹೀಗೇ ಎಲ್ಲರಿಗೂ ಬೆಳ್ಳಿ ಬಟ್ಟಲಿನ ಕಾಣಿಕೆ ಕೊಟ್ಟಿದ್ದಳು.

ಆಲ್ ಈಜ್ ವೆಲ್ ವಿತ್ ದ ವರ್ಲ್ಡ್. ಸತ್ಯನಾರಾಯಣ ಸ್ವಾಮಿ ಈಜ್ ಹಿಯರ್.

ಹೆವೀ ಲಂಚ್ ಅಲ್ಲವಾ! ಡಿನ್ನರಿನ ಅಗತ್ಯ ಇಲ್ಲ. ಹಸಿವಾದರೆ ಫ್ರಿಡ್ಜ್ ತುಂಬಾ ಸಾಕಷ್ಟು 'ಲೆಫ್ಟ್ ಓವರ್'ಗಳಿವೆ. ಯಾರಿಗೆ ಏನು ಬೇಕೋ ಬಿಸಿ ಮಾಡಿಕೊಂಡು ತಿನ್ನಬಹುದು. ಗೀತಾಳಿಗೆ ವಾರದ ಕೊನೆಯಲ್ಲಿ ಸಾಕಷ್ಟು ಕೆಲಸ. ತನಗೂ, ಮಗಳಿಗೂ ಹೇರ್ ಕಟ್, ಲಾಂಡ್ರಿ, ಪ್ರೆಸ್ಸಿಂಗ್, ವ್ಯಾಕ್ಯೂಮಿಂಗ್ - ಗಂಡ ಹೆಂಡತಿ ಮಾಡಿಕೊಳ್ಳುತ್ತಾರೆ. ಅದೆಲ್ಲಾ ನನಗೆ ಯಾಕೆ, ನನ್ನ ಕೋಣೆಯಲ್ಲಿ ಕೂತು ಹಾಯಾಗಿ ಪುಸ್ತಕ ಓದಿಕೊಂಡರಾಯಿತು.

* * *

ನೌಕರಿ ಕಳೆದುಕೊಂಡಾಗಿನಿಂದ ಏನೂ ತೋಚುತ್ತಿಲ್ಲ. ಬ್ರೌಜಿಂಗ್, ಚಾಟಿಂಗ್ ಎಷ್ಟೊತ್ತಂತಾ ಮಾಡುವುದು. ಚಾಟಿಂಗಲ್ಲಿ ಒಬ್ಬಾತ ಇಂಟೆರೆಸ್ಟಿಂಗ್ ಆಗಿದಾನೆ. ನೋಡಬೇಕು. ಗೀತಕ್ಕ ಒಳ್ಳೆಯವಳು. ವೀಸಾಗೆ ಇನ್ನೂ ಒಂದು ತಿಂಗಳು ಟೈಮ್ ಇದೆ, ಅವಳ ಮನೆಯಲ್ಲೇ ಇದ್ದು ನೌಕರಿ ನೋಡಿಕೋ ಅಂದಳು. ಅಷ್ಟರಲ್ಲಿ ಝಾನ್ಸಿ ಚಿಕ್ಕಮ್ಮ ಕೂಡಾ ಇಲ್ಲಿಗೆ ಬಂದಿದ್ದಳು. ಗೀತಕ್ಕ ಝಾನ್ಸಿ ಚಿಕ್ಕಮ್ಮನ ಮಗಳು. ಚಿಕ್ಕಮ್ಮ ಚೆನ್ನಾಗಿ